	ಸರ್ಕಾರದ ಗಮನಕ್ಕೆ ಬಂದಿದೆಯೇ?	ವತಿಯಿಂದ ೧೯ ಅಂಗಡಿಗಳು ಹಾಗೂ ೪ ಮನೆಗಳು ನಿರ್ಮಿಸಿದ್ದು, ೧೯ ಅಂಗಡಿಗಳು ಮತ್ತು ೨ ಮನೆಗಳನ್ನು ಗುತ್ತಿಗೆಗೆ ನೀಡಲಾಗಿರುತ್ತದೆ ಉಳಿದ ೨ ಮನೆಗಳನ್ನು ದೇವಾಲಯದ ಅರ್ಚಕರ ವಾಸ್ತವ್ಯಕ್ಕಾಗಿ ಉಚಿತವಾಗಿ ನೀಡಲಾಗಿರುತ್ತದೆ
ಆ)	ಬಂದಿದ್ದಲ್ಲಿ ಇವುಗಳನ್ನು ತೆರವುಗೊಳಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳವುದೇ?	ಪ್ರಶ್ನೆ ಉದ್ಭವಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೯೬ (೧೯೪೪)

ಸದಸ್ಯರ ಹೆಸರು ಡಾ ಸುಧಾಕರ್ ಎಂ ಸಿ (ಚಿಂತಾಮಣಿ)

ಉತ್ತರಿಸುವ ಸಚಿವರು ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಹಾಗೂ ಮುಜರಾಯಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿಂತಾಮಣಿ ನಗರದ ಸಹನೇಶ್ವರ ದೇವಸ್ಥಾನ ಹಾಗೂ ದಾದಾರಾವ್ ಛತ್ರದ ಜಮೀನಿನಲ್ಲಿ ಮುಜರಾಯಿ ಇಲಾಖೆಗೆ ಸೇರಿರುವ ಅಂಗಡಿ ಮಳಿಗೆಗಳು ಕೇಂದ್ರ ಸ್ಥಳದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ

ಆ)	ಬಂದಿದ್ದಲ್ಲಿ ಈ ಜಾಗದಲ್ಲಿ ವಾಣಿಜ್ಯ ಸಂಕೀರ್ಣವನ್ನು ಕಟ್ಟುವುದರಿಂದ ಪುರಾತನ ಸಹನೇಶ್ವರ ದೇವಸ್ಥಾನವನ್ನು ಅಭಿವೃದ್ಧಿ ಪಡಿಸುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವುದು ನಿಜವಲ್ಲವೆ ?	ಈ ಜಾಗದಲ್ಲಿ ವಾಣಿಜ್ಯ ಸಂಕೀರ್ಣವನ್ನು ಕಟ್ಟುವುದರಿಂದ ಪುರಾತನ ಸಹನೇಶ್ವರ ದೇವಸ್ಥಾನವನ್ನು ಅಭಿವೃದ್ಧಿಪಡಿಸುವುದರಿಂದ ಸರ್ಕಾರಕ್ಕೆ ಯಾವುದೇ ರೀತಿ ಹೆಚ್ಚಿನ ಆದಾಯ ಬರುವುದಿಲ್ಲ ಆದರೆ ದೇವಾಲಯಕ್ಕೆ ಆದಾಯ ಬರುತ್ತದೆ ಆದರೆ ಸದರಿ ದೇವಾಲಯದ ಆವರಣದಲ್ಲಿರುವ ಒಟ್ಟು ೧೯ ಅಂಗಡಿಗಳು ಮತ್ತು ೪ ಮನೆಗಳಲ್ಲಿ ೫ ಅಂಗಡಿಗಳವರು ಮತ್ತು ೨ ಮನೆಗಳವರು ಸರ್ಕಾರದ ನಿಗಧಿಪಡಿಸಿದ ಬಾಡಿಗೆ ಹೆಚ್ಚಾಗಿದೆಯೆಂದು ಇದರ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ಪಡೆದುಕೊಂಡಿರುತ್ತಾರೆ ಈ ಪ್ರಕರಣಗಳು ಇತ್ಯರ್ಥವಾದ ನಂತರ ಈ ಅಂಗಡಿಗಳರವನ್ನು ನಿಯಮಾನುಸಾರ ಪಿ ಪಿ ಎ ಕಾಯ್ದೆಯಡಿ ತೆರವುಗೊಳಿಸಿದ ನಂತರ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸುವುದರ ಮೂಲಕ ಸದರಿ ದೇವಾಲಯವನ್ನು ಅಭಿವೃದ್ಧಿ ಪಡಿಸಬಹುದಾಗಿದೆ
ಇ)	ನಿಜವಾದಲ್ಲಿ, ಈ ಮಳಿಗೆಗಳನ್ನು ಖಾಲಿ ಮಾಡಿಸಿ ವಾಣಿಜ್ಯ ಸಂಕೀರ್ಣ ಕಟ್ಟಡದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಪ್ರಶ್ನೆ ' ಆ'ನಲ್ಲಿ ನೀಡಿದ ಉತ್ತರದಂತೆ ಸದರಿ ದೇವಾಲಯಕ್ಕೆ ಸೇರಿದ ಅಂಗಡಿಗಳು ಮತ್ತು ಮನೆಗಳಲ್ಲಿ ಬಾಡಿಗೆದಾರರಿರುವುದರಿಂದ ಅವರುಗಳನ್ನು ನಿಯಮಾನುಸಾರ ಖಾಲಿ ಮಾಡಿಸಿದ ನಂತರ ವಾಣಿಜ್ಯ ಸಂಕೀರ್ಣ ಹೊಸದಾಗಿ ನಿರ್ಮಿಸುವ ಬಗ್ಗೆ ಕ್ರಮ

		ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೯೭ (೧೯೫೫)

ಸದಸ್ಯರ ಹೆಸರು ಡಾ ಸುಧಾಕರ್ ಎಂ ಸಿ (ಚಿಂತಾಮಣಿ)

ಉತ್ತರಿಸುವ ಸಚಿವರು ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಿಂತಾಮಣಿ ನಗರದ ಕೃಷಿ ಉತ್ಪನ್ನ _____ಮಾರುಕಟ್ಟೆಯಲ್ಲಿ ರೈತರಿಗೆ _____ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಕೆಲವು ಪ್ರಕರಣ ಬಂದಿದೆ
ಆ)	ಸರ್ಕಾರ ನಿಗದಿಪಡಿಸಿರುವ ಕಮಿಷನ್ ಗಿಂತ ಹೆಚ್ಚಿನ ಹಣವನ್ನು ದಳ್ಳಾಳಿಗಳು ರೈತರಿಂದ ಪಡೆಯುತ್ತಿರುವುದು ನಿಜವಲ್ಲವೆ?	ದಲ್ಲಾಲರು ಕಮಿಷನ್ ವಸೂಲಿ ಮಾಡಿರುವುದಾಗಿ ಒಬ್ಬ ರೈತನಿಂದ ಚಿಂತಾಮಣಿ ಸಮಿತಿಗೆ ದೂರು ಬಂದಿದೆ
ಇ)	ಹಾಗಿದ್ದಲ್ಲಿ, ಈ ದಳ್ಳಾಳಿಗಳ ಮೇಲೆ ಸರ್ಕಾರದ ಕ್ರಮವೇನು?	ನಿಯಮಾನುಸಾರ ಕ್ರಮ ಜರುಗಿಸಿ, ಸಂಬಂಧಿಸಿದ ರೈತರಿಗೆ ಕಮಿಷನ್ ಮೊತ್ತವನ್ನು ವಾಪಸ್ ಕೊಡಿಸಲಾಗಿದೆ
ಈ)	ಚಿಂತಾಮಣಿ ಕೃಷಿ ಉತ್ಪನ್ನ ಮಾರುಕಟ್ಟೆ ಜಿಲ್ಲೆಯಲ್ಲಿ ಉತ್ತಮ ಮಾರುಕಟ್ಟೆಯಾಗಿ ಕೀರ್ತಿ ಪಡೆದಿರುವುದು ನಿಜವಲ್ಲವೆ?	ಜಿಲ್ಲೆಯಲ್ಲಿ ಉತ್ತಮ ಮಾರುಕಟ್ಟೆಗಳಲ್ಲಿ ಚಿಂತಾಮಣಿಯು ಸಹ ಒಂದು
ಉ)	ಈ ದುಸ್ಥಿತಿಗೆ ಕಾರಣವಾದ ತಪ್ಪಿತಸ್ಥರ ವಿರುದ್ಧ ಕೈಗೊಳ್ಳುವ ಕ್ರಮವೇನು?	ಅನ್ವಯಿಸುವುದಿಲ್ಲ